KA14030075292025

**5 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಶಿವಮೊಗ್ಗ.**

ಉಪಸ್ಥಿತರು: ಶ್ರೀ ಪ್ರಹಾನ್ ಸಿಂಗ್ ಹೆಚ್.ಪಿ.
5 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ.ಗಳು,
ಶಿವಮೊಗ್ಗ.

ತೀರ್ಪಿನ ದಿನಾಂಕ **: 01** ನೇ ಜುಲೈ **2026.**

ಸಿ.ಸಿ. ನಂಃ **5941/2025**

| | |
|---|---|
| ಫಿರ್ಯಾದುದಾರರು : | ತುಂಗಾನಗರ ಪೊಲೀಸ್ ಠಾಣೆ, ಶಿವಮೊಗ್ಗ. |
| | **( ಸಹಾಯಕ ಸರ್ಕಾರಿ ಅಭಿಯೋಜಕರು)** |
| | - ವಿರುದ್ಧ - |
| ಆರೋಪಿತರು : | 1. ಸಂದೇಶ್ , ಬಿನ್ ಮಂಜಪ್ಪ , ವಯಸ್ಸುಃ 25 ವರ್ಷ,<br><br>2. ಮಂಜಪ್ಪ , ಬಿನ್ ಲೇಟ್ ಗುತ್ತಪ್ಪ , ವಯಸ್ಸುಃ 55 ವರ್ಷ,<br><br>ಇಬ್ಬರೂ ಕಡೇಕಲ್ ಗ್ರಾಮ, ಶಿವಮೊಗ್ಗ ತಾಲ್ಲೂಕು ವಾಸಿಗಳು. |
| | **(ಆರೋಪಿ ಪರ ಶ್ರೀ.ಕೆ.ಎಂ.ಜೆ.ವಕೀಲರು )** |

| | | |
|---|---|---|
| 1. | ಕೃತ್ಯ ನಡೆಯಲಾಗಿದೆ ಎಂಬ ದಿನಾಂಕ | 29.03.2025 |
| 2. | ಕೃತ್ಯ ವರದಿಯಾದ ದಿನಾಂಕ | 30.03.2025 |
| 3. | ಪಿರ್ಯಾದುದಾರರ ಹೆಸರು | ಗಣೇಶ್ |
| 4. | ಆರೋಪಿಸಲ್ಪಟ್ಟ ಆರೋಪಗಳು | ಭಾರತೀಯ ನ್ಯಾಯ ಸಂಹಿತೆ ಕಲಂ. 115(2), 118(1), 352, 351(2), ಸಹವಾಚಕ ಕಲಂ 3(5) |
| 5. | ಸಾಕ್ಷಿ ವಿಚಾರಣೆ ಪ್ರಾರಂಭವಾದ ದಿನಾಂಕ | 25.06.2026 |
| 6. | ಸಾಕ್ಷಿ ವಿಚಾರಣೆ ಮುಕ್ತಾಯವಾದ ದಿನಾಂಕ | 25.06.2026 |
| 7. | ನ್ಯಾಯಾಧೀಶರ ಅಭಿಪ್ರಾಯ | ಆರೋಪಿತರನ್ನು ನಿರ್ದೋಷಿಗಳೆಂದು |

| | | |
|---|---|---|
| | | ತೀರ್ಮಾನಿಸಲಾಗಿದೆ. |

(ಶ್ರೀ ಪ್ರಹಾನ್ ಸಿಂಗ್ ಹೆಚ್.ಪಿ.)
5 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ.ಗಳು, ಶಿವಮೊಗ್ಗ.

ತೀರ್ಪು

ಶಿವಮೊಗ್ಗದ ತುಂಗಾ ನಗರ ಪೋಲೀಸ್ ಠಾಣೆಯ ಠಾಣಾಧಿಕಾರಿಗಳು ಆರೋಪಿತರ ವಿರುದ್ಧ ಭಾರತೀಯ ನ್ಯಾಯ ಸಂಹಿತೆ ಕಲಂ. 115(2), 118(1), 352, 351(2), ಸಹಕಲಂ 3(5) ರನ್ವಯ ಶಿಕ್ಷಾರ್ಹ ಅಪರಾಧಗಳನ್ನು ಎಸಗಿರುತ್ತಾರೆಂದು ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ.

**2.** ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆ:-

ದಿನಾಂಕ:29.03.2025 ರಂದು ರಾತ್ರಿ ಸುಮಾರು 10.30 ಗಂಟೆಯಿಂದ 11.00 ಗಂಟೆ ಸಮಯದಲ್ಲಿ, ಶಿವಮೊಗ್ಗ ಜಿಲ್ಲೆಯ ತುಂಗಾನಗರ ಪೊಲೀಸ್ ಠಾಣಾ ವ್ಯಾಪ್ತಿಯ, ಶಿವಮೊಗ್ಗ ತಾಲ್ಲೂಕ್ ಕುಸ್ಕೂರು ಗ್ರಾಮದ ಹೊಸೂರು ಕಡೆಗೆ ಹೋಗುವ ಗೌಡ್ರು ಮಂಜಣ್ಣ ರವರ ತೋಟದ ಗೇಟ್ ಎದುರು ರಸ್ತೆಯ ಬಳಿ, ಆರೋಪಿತರು ಚಾಸಾ-1 ರವರ ಯಾವುದೋ ಹಳೇ ದ್ವೇಷದಿಂದ, ಚಾಸಾ-1 ರವರೊಂದಿಗೆ ಜಗಳ ತೆಗೆದು 1 ನೇ ಆರೋಪಿಯು ಬ್ಲೇಡಿನಿಂದ ಚಾಸಾ-1 ರವರ ಬಲಗಡೆ ಹೆಬ್ಬೆರಳಿಗೆ ಕೂಯಿದ್ದು, 2 ನೇ ಆರೋಪಿಯು ಅವನ ಕೈಗಳಿಂದ ಚಾಸಾ-1 ರವರ ಮೈ ಕೈಗೆ ಗುದ್ದಿ ಸಾಮಾನ್ಯ ಸ್ವರೂಪದ ರಕ್ತಗಾಯ ಪಡಿಸಿದ್ದಲ್ಲದೇ, ಆರೋಪಿತರಿಬ್ಬರೂ ಚಾಸಾ-1 ರವರ ತೊಟ್ಟಿದ್ದ ಅಂಗಿ ಮತ್ತು ಬನಿಯನ್ ಅನ್ನು ಹರಿದು ಹಾಕಿ, ಗಲಾಟೆ ಮಾಡಿರುತ್ತಾರೆ. ಅಲ್ಲದೇ, ದಿನಾಂಕ 30.03.2025 ರಂದು ಬೆಳಿಗ್ಗೆ 11-45 ಗಂಟೆಗೆ 2 ನೇ ಆರೋಪಿತನು ಚಾಸಾ-1 ರವರ ಮನೆಯ ಎದುರು ರಸ್ತೆಯಲ್ಲಿ ನಿಂತುಕೊಂಡು ಚಾಸಾ-1 ರವರನ್ನು ಉದ್ದೇಶಿಸಿ ' ಏ ಗಣೇಶ ಸೂಳೆಮಗನೇ ಬೋಳಿಮಗನೇ' ಅಂತಾ ಅವಾಚ್ಯವಾಗಿ ಬೈಯುತ್ತಾ, ಏನಾದರೂ ಪೋಲೀಸ್ ಠಾಣೆಗೆ ದೂರು ಕೊಟ್ಟರೇ 'ನಿನ್ನ ಮತ್ತು ನಿಮ್ಮ ಕುಟುಂಬದವರನ್ನು ಪೆಟ್ರೋಲ್ ಸುರಿದು ಬೆಂಕಿ ಹಾಕಿ ಸುಟ್ಟು ಬಿಡುತ್ತೇನೆಂದು' ಜೀವ ಬೆದರಿಕೆ ಹಾಕಿರುತ್ತಾರೆ ಎಂಬ ಆರೋಪಗಳು ಕಂಡು ಬಂದ ಮೇರೆಗೆ ಆರೋಪಿತರ ವಿರುದ್ಧ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ.

**3.** ಆರೋಪಿತರು ತಮ್ಮ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನಿನ ಮೇಲೆ ಬಿಡುಗಡೆಯಾಗಿರುತ್ತಾರೆ. ಅಂತಿಮ ವರದಿಯನ್ನು ಪರಿಶೀಲಿಸಿದ ನಂತರ ಆರೋಪಿತರ ವಿರುದ್ಧ ಭಾರತೀಯ ನ್ಯಾಯ ಸಂಹಿತೆ ಕಲಂ. 115(2), 118(1), 352, 351(2), ಸಹಕಲಂ 3(5)ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳಿಗಾಗಿ ಸಂಜ್ಞೆಯನ್ನು ತೆಗೆದುಕೊಂಡು. ಆರೋಪಿತರಿಗೆ ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ.230 ರಡಿಯಲ್ಲಿ ದೋಷಾರೋಪಣಾ ಪತ್ರದ ನಕಲು ಹಾಗೂ ಅದಕ್ಕೆ ಲಗತ್ತಿಸಿದ ದಾಖಲೆಗಳ ಪ್ರತಿಗಳನ್ನು ನೀಡಲಾಗಿರುತ್ತದೆ. ನಂತರ ಪರ್ಯಾಲೋಚಿಸಿ, ಪರಿಶೀಲಿಸಿ, ವಿಚಾರಣೆ ಮಾಡಿದ ನಂತರ ಆರೋಪಿತರ ಆರೋಪ ವಿಚಾರಣೆ ಮಾಡಬಹುದಾದ ಅಪರಾಧವನ್ನು ಮಾಡಿರಬಹುದು ಎಂಬ ಪೂರ್ವ ಭಾವನೆ ಮಾಡಲು ಆಧಾರವಿದೆಯೆಂದು ಅಭಿಪ್ರಾಯಪಟ್ಟು, ಸದರಿ ಆರೋಪಗಳನ್ನು ವಿಚಾರಣೆ ಮಾಡಲು ನ್ಯಾಯಾಲಯವು ಸಕ್ಷಮವಾಗಿದೆಯೆಂದು ಮತ್ತು ಸದರಿ ಆರೋಪಗಳಿಗೆ ಸಕ್ಷಮ ದಂಡನೆಯನ್ನು ನ್ಯಾಯಾಲಯವು ವಿಧಿಸಬಹುದೆಂದು ಅಭಿಪ್ರಾಯ ಪಟ್ಟು, ಆರೋಪಿತರ ವಿರುದ್ಧ ಮೇಲ್ಕಂಡ ಕಲಂ ಗಳಡಿಯಲ್ಲಿನ ಶಿಕ್ಷಾರ್ಹ ಅಪರಾಧಗಳಿಗಾಗಿ ದೋಷಾರೋಪಣೆಯನ್ನು ಓದಿ ಹೇಳಲಾಗಿ ಆರೋಪಿತರು ತಮ್ಮ ವಿರುದ್ಧದ ಆರೋಪಗಳನ್ನು ನಿರಾಕರಿಸಿ ವಿಚಾರಣೆಯಾಗಬೇಕೆಂದು ಕೋರಿಕೊಂಡಿರುತ್ತಾರೆ.

**4.** ಅಭಿಯೋಜನೆಯು ಆರೋಪಿತರ ವಿರುದ್ಧ ಮಾಡಿರುವ ಆರೋಪಗಳನ್ನು ರುಜುವಾತು ಪಡಿಸುವ ಸಲುವಾಗಿ ಒಬ್ಬ ಸಾಕ್ಷಿದಾರನನ್ನು ಫ್ರಾಸಾ.1 ಎಂದು ವಿಚಾರಣೆಗೆ ಒಳಪಡಿಸಿಕೊಂಡು, ಒಟ್ಟು 09 ದಾಖಲೆಗಳನ್ನು ನಿಪಿ.1 ರಿಂದ ನಿಪಿ.9 ಎಂದು ಗುರುತಿಸಿಕೊಂಡಿರುತ್ತಾರೆ.

**5.** ಆರೋಪಿತರ ವಿರುದ್ಧ ಯಾವುದೇ ಅಪರಾಧ ಸಾಭೀತು ಪಡಿಸುವ ಸಾಕ್ಷ್ಯ ಇಲ್ಲದೇ ಇರುವುದರಿಂದ ಭಾರತೀಯ ನಾಗರೀಕ ಸುರಕ್ಷಾ ಸಂಹಿತೆಯ ಕಲಂ.351 ರಡಿಯಲ್ಲಿ ಆರೋಪಿತರ ಹೇಳಿಕೆಗೆ ವಿನಾಯಿತಿ ನೀಡಲಾಗಿರುತ್ತದೆ.

**6.** ಪ್ರಜ್ಞಾ ಸಹಾಯಕ ಸರ್ಕಾರಿ ಅಭಿಯೋಜಕರ ಮತ್ತು ಆರೋಪಿತರ ಪರ ವಕೀಲರ ವಾದ ಮತ್ತು ಪ್ರತಿವಾದವನ್ನು ಆಲಿಸಲಾಗಿರುತ್ತದೆ. ಕಡತದಲ್ಲಿನ ಮೌಖಿಕ ಹಾಗೂ ದಾಖಲಾತಿ ಸಾಕ್ಷಗಳನ್ನು ಮತ್ತು ಇತರೆ ಅಂಶಗಳನ್ನು ಪರಿಶೀಲಿಸಲಾಗಿರುತ್ತದೆ.

**7.** ಮೇಲಿನ ವಸ್ತು ಸ್ಥಿತಿಯಿಂದ ನ್ಯಾಯಾಲಯದ ಅವಗಾಹನೆಗೆ ಉದ್ಭವಿಸುವ ಅಂಶಗಳು ಈ ಕೆಳಕಂಡಂತಿವೆಃ-

<u>ಅಂಶಗಳು</u>

<u>ಅಂಶ ***1***</u>***:-*** ದಿನಾಂಕಃ ದಿನಾಂಕಃ 29.03.2025 ರಂದು ಶಿವಮೊಗ್ಗ ಜಿಲ್ಲೆಯ ತುಂಗಾನಗರ ಪೊಲೀಸ್ ಠಾಣಾ ವ್ಯಾಪ್ತಿಯ ಕುಸ್ಕೂರು ಗ್ರಾಮದಲ್ಲಿ ರಾತ್ರಿ ಸುಮಾರು 10.30 ರಿಂದ 11.00 ಗಂಟೆ ಸಮಯದಲ್ಲಿ ಚಾಸಾ.1 ರವರು ಕುಸ್ಕೂರು ಗ್ರಾಮದ ಹೊಸೂರು ಕಡೆಗೆ ಹೋಗುವ ಗೌಡ್ರು ಮಂಜಣ್ಣ ರವರ ತೋಟದ ಗೇಟ್ ಎದುರು ರಸ್ತೆಯ ಬಳಿಇದ್ದಾಗ ಆರೋಪಿತರು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಮತ್ತು ಸ್ವಇಚ್ಛೆಯಿಂದ ಚಾಸಾ.1 ರವರ ಯಾವುದೋ ಹಳೇ ದ್ವೇಷದಿಂದ ಚಾಸಾ.1 ರವರೊಂದಿಗೆ ಜಗಳ ತೆಗೆದು, 1 ನೇ ಆರೋಪಿಯು ಚಾಸಾ.1 ರವರ ಬಲಗಡೆ ಹೆಬ್ಬೆರಳಿಗೆ ಬ್ಲೇಡ್ ನಿಂದ ಕೊಯ್ದು, ಸಾಮಾನ್ಯ ರಕ್ತ ಗಾಯವನ್ನುಂಟು ಮಾಡಿರುತ್ತೀರಿ, ಆ ಮೂಲಕ ಆರೋಪಿತರು ಭಾರತೀಯ ನ್ಯಾಯ ಸಂಹಿತೆ ಕಲಂ.118(1) ಸಹವಾಚಕ ಕಲಂ 3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತು ಪಡಿಸಿದ್ದಾರೆಯೆ ?

ಅಂಶ **2***:-* ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಮತ್ತು ಸ್ವಇಚ್ಛೆಯಿಂದ, 2 ನೇ ಆರೋಪಿತನು ಕೈಗಳಿಂದ ಚಾಸಾ.1 ರವರ ಮೈಕೈ ಗೆ ಗುದ್ದಿ ಸಾಮಾನ್ಯ ಸ್ವರೂಪದ ನೋವನ್ನುಂಟು ಮಾಡಿರುತ್ತಾರೆ, ಆ ಮೂಲಕ ಆರೋಪಿತರು ಭಾರತೀಯ ನ್ಯಾಯ ಸಂಹಿತೆ ಕಲಂ.115(2) ಸಹವಾಚಕ ಕಲಂ 3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತು ಪಡಿಸಿದ್ದಾರೆಯೆ ?

ಅಂಶ **3***:-* ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಮತ್ತು ಸ್ವಇಚ್ಛೆಯಿಂದ, ದಿನಾಂಕ 30.03.2025 ರಂದ ಬೆಳಗ್ಗೆ 11.45 ಗಂಟೆ ಸಮಯದಲ್ಲಿ 2 ನೇ ಆರೋಪಿಯು ಚಾಸಾ.1 ರವರ ಮನೆಯ ಎದುರು ರಸ್ತೆಯಲ್ಲಿ ನಿಂತುಕೊಂಡು ಚಾಸಾ.1 ರವರನ್ನು ಉದ್ದೇಶಿಸಿ, ಗಣೇಶ ಸೂಳೆಮಗನೆ, ಬೋಳಿಮಗನೆ ಎಂದು ಅವಾಚ್ಯವಾಗಿ ಬೈಂಯುತ್ತಾ ಅವಮಾನ ಮಾಡಿ ಆ ಮೂಲಕ ಸದರಿಯವರಿಗೆ ಉದ್ರೇಕವನ್ನುಂಟು ಮಾಡಿ ಅತಂಹ ಉದ್ರೇಕದಿಂದ

ಅವರ ಶಾಂತಿ ಭಂಗವನ್ನುಂಟು ಮಾಡಲು ಮೇಲೆ ಹೇಳಿದ ಅವಾಚ್ಯ ಶಬ್ದದಿಂದ ಉದ್ರೇಕಿಸಿರುತ್ತಾರೆ. ಆ ಮೂಲಕ ಆರೋಪಿತರು ಭಾರತೀಯ ನ್ಯಾಯ ಸಂಹಿತೆ ಕಲಂ.352 ಸಹವಾಚಕ ಕಲಂ 3(5)ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತು ಪಡಿಸಿದ್ದಾರೆಯೆ ?

ಅಂಶ **4:-** ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರು ಅಪರಾಧ ಮಾಡುವ ಸಮಾನ ಉದ್ದೇಶದಿಂದ, 2 ನೇ ಆರೋಪಿಯು ಚಾಸಾ.1 ರವರಿಗೆ ಏನಾದರೂ ಪೊಲೀಸ್ ಠಾಣೆಗೆ ದೂರು ಕೊಟ್ಟರೆ ನಿನ್ನ ಮತ್ತು ನಿಮ್ಮ ಕುಟುಂಬದವರನ್ನು ಪೆಟ್ರೋಲ್ ಸುರಿದು ಬೆಂಕಿ ಹಾಕಿ ಸುಟ್ಟು ಬಿಡುತ್ತೇನೆ ಎಂದು ಜೀವ ಬೆದರಿಕೆ ಹಾಕಿರುತ್ತಾರೆ. ಆ ಮೂಲಕ ಆರೋಪಿತರು ಭಾರತೀಯ ನ್ಯಾಯ ಸಂಹಿತೆ ಕಲಂ.351(2) ಸಹವಾಚಕ ಕಲಂ 3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತು ಪಡಿಸಿದ್ದಾರೆಯೆ ?

ಅಂಶ **5:** ಏನು ಆದೇಶ?

**8.** ಮೇಲ್ಕಂಡ ಅಂಶಗಳಿಗೆ ನ್ಯಾಯಾಲಯದ ಉತ್ತರ ಈ ಕೆಳಕಂಡಂತಿವೆಃ-

ಅಂಶ - 1 : ನಕಾರಾತ್ಮಕವಾಗಿ,
ಅಂಶ - 2 : ನಕಾರಾತ್ಮಕವಾಗಿ,
ಅಂಶ - 3 : ನಕಾರಾತ್ಮಕವಾಗಿ,
ಅಂಶ - 4 : ನಕಾರಾತ್ಮಕವಾಗಿ,
ಅಂಶ - 5 : ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ,

## ಕಾರಣಗಳು

**9.** ಅಂಶ **1** ರಿಂದ **4:-** ಈ ಎಲ್ಲಾ ಅಂಶಗಳು ಏಕ ಘಟನೆಯಿಂದ ಉದ್ಭವಿಸಿರುವುದರಿಂದ ಪುನರಾವರ್ತನೆ ತಪ್ಪಿಸುವ ಸಲುವಾಗಿ ಈ ಎಲ್ಲಾ ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿರುತ್ತದೆ.

**10.** ಅಭಿಯೋಜನೆಯ ಪ್ರಕರಣದ ಸಾರಾಂಶವೇನೆಂದರೆ;- ದಿನಾಂಕಃ29.03.2025 ರಂದು ರಾತ್ರಿ ಸುಮಾರು 10.30 ಗಂಟೆಯಿಂದ 11.00 ಗಂಟೆ ಸಮಯದಲ್ಲಿ, ಶಿವಮೊಗ್ಗ ಜಿಲ್ಲೆಯ ತುಂಗಾನಗರ ಪೊಲೀಸ್ ಠಾಣಾ ವ್ಯಾಪ್ತಿಯ, ಶಿವಮೊಗ್ಗ ತಾಲ್ಲೂಕ್ ಕುಸ್ಕೂರು ಗ್ರಾಮದ ಹೊಸೂರು ಕಡೆಗೆ

ಹೋಗುವ ಗೌಡ್ರು ಮಂಜಣ್ಣ ರವರ ತೋಟದ ಗೇಟ್ ಎದುರು ರಸ್ತೆಯ ಬಳಿ ಇದ್ದಾಗ ಆರೋಪಿತರು ಚಾಸಾ-1 ರವರ ಯಾವುದೋ ಹಳೇ ದ್ವೇಷದಿಂದ ಚಾಸಾ-1 ರವರೊಂದಿಗೆ ಜಗಳ ತೆಗೆದು 1 ನೇ ಆರೋಪಿಯು ಬ್ಲೇಡಿನಿಂದ ಚಾಸಾ-1 ರವರ ಬಲಗಡೆ ಹೆಬ್ಬೆರಳಿಗೆ ಕೂಯ್ದಿದ್ದು, 2 ನೇ ಆರೋಪಿಯು ಅವನ ಕೈಗಳಿಂದ ಚಾಸಾ-1 ರವರ ಮೈ ಕೈಗೆ ಗುದ್ದಿ ಸಾಮಾನ್ಯ ಸ್ವರೂಪದ ರಕ್ತಗಾಯ ಪಡಿಸಿದ್ದಲ್ಲದೇ, ಆರೋಪಿತರಿಬ್ಬರೂ ಚಾಸಾ-2 ರವರ ತೊಟ್ಟಿದ್ದ ಅಂಗಿ ಮತ್ತು ಬನಿಯನ್ ಅನ್ನು ಹರಿದು ಹಾಕಿ, ಗಲಾಟೆ ಮಾಡಿರುತ್ತಾರೆ. ಅಲ್ಲದೇ, ದಿನಾಂಕ 30.03.2025 ರಂದು ಬೆಳಿಗ್ಗೆ 11-45 ಗಂಟೆಗೆ 2 ನೇ ಆರೋಪಿತನು ಚಾಸಾ-1 ರವರ ಮನೆಯ ಎದುರು ರಸ್ತೆಯಲ್ಲಿ ನಿಂತುಕೊಂಡು ಚಾಸಾ-1 ರವರನ್ನು ಉದ್ದೇಶಿಸಿ 'ಏ ಗಣೇಶ ಸೂಳೆಮಗನೇ ಬೋಳಿಮಗನೇ' ಅಂತಾ ಅವಾಚ್ಯವಾಗಿ ಬೈಯುತ್ತಾ, ಏನಾದರೂ ಪೋಲೀಸ್ ಠಾಣೆಗೆ ದೂರು ಕೊಟ್ಟರೇ 'ನಿನ್ನ ಮತ್ತು ನಿಮ್ಮ ಕುಟುಂಬದವರನ್ನು ಪೆಟ್ರೋಲ್ ಸುರಿದು ಬೆಂಕಿ ಹಾಕಿ ಸುಟ್ಟು ಬಿಡುತ್ತೇನೆಂದು' ಜೀವ ಬೆದರಿಕೆ ಹಾಕಿರುತ್ತಾರೆ ಎಂಬುದಾಗಿರುತ್ತದೆ.

**11.** ಫ್ರಾಸಾ.1 ಗಣೇಶ ರವರು ಪ್ರಕರಣದ ನೊಂದ ವ್ಯಕ್ತಿ/ ಫಿರ್ಯಾದುದಾರರಾಗಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ನ್ಯಾಯಾಲಯದ ಮುಂದಿರುವ ಆರೋಪಿತರು ತನ್ನ ಸಂಬಂಧಿಕರು, ಅವರು ತನಗೆ ಅವಾಚ್ಯ ಶಬ್ದಗಳಿಂದ ನಿಂದಿಸಿಲ್ಲ, ಹಲ್ಲೆಯನ್ನು ಮಾಡಿಲ್ಲ, ಗಲಾಟೆಯನ್ನು ಮಾಡಿಲ್ಲ ಹಾಗೂ ವಿವಸ್ತ್ರಗೂಳಿಸಿಲ್ಲ ಹಾಗೂ ಜೀವ ಬೇದರಿಕೆ ಹಾಕಿರುವುದಿಲ್ಲ ಎಂದು ನುಡಿದು, ನಿಪಿ.1, ಪ್ರಥಮ ವರ್ತಮಾನ ವರದಿಯಲ್ಲಿ, ನಿಪಿ.2 ಮತ್ತು 7ರ ಪಂಚನಾಮೆಯಲ್ಲಿ , ನಿಪಿ.3 ಮತ್ತು 8ರ ಕಚ್ಚಾ ನಕಾಶೆಯಲ್ಲಿ, ತನ್ನ ಸಹಿಗಳನ್ನು ಕ್ರಮವಾಗಿ ನಿಪಿ.1(ಎ), ನಿಪಿ.2(ಎ),ನಿಪಿ.3(ಎ), ನಿಪಿ.7(ಎ) ಮತ್ತು ನಿಪಿ.8(ಎ)ಎಂದು ಗುರುತಿಸಿ, ಸದರಿ ನಿಪಿ.1,2,3,7 ಮತ್ತು 8 ರಲ್ಲಿ ಏನನ್ನು ಬರೆಯಲಾಗಿದೆ ಎಂದು ತನಗೆ ಗೊತ್ತಿಲ್ಲ, ತಾನು ಕೇವಲ ಸಹಿಯನ್ನು ಮಾಡಿರುವುದಾಗಿ ನುಡಿದು, 4 ಭಾವಚಿತ್ರಗಳನ್ನು ನಿಪಿ.4 ರಿಂದ 6 ಮತ್ತು 9 ಎಂದು ಗುರುತಿಸಿ, ಅದರಲ್ಲಿ ತನ್ನ ಅಸ್ತಿತ್ವವನ್ನು ಗುರುತಿಸಿ, ಸದರಿ ಭಾವಚಿತ್ರಗಳನ್ನು ಏಕೆ ತೆಗೆಯಲಾಗಿದೆ ಎಂದು ತನಗೆ ಗೊತ್ತಿಲ್ಲ, ಕೇವಲ ತಾನು ಪೋಲೀಸರ ಕೋರಿಕೆಯ ಮೇರೆಗೆ ಭಾಗಿಯಾಗಿರುತ್ತೇನೆ ಎಂದು ಅಭಿಯೋಜನೆಯ ಪ್ರಕರಣಕ್ಕೆ ಭಾಗಶಃ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ. ಸದರಿ ಫ್ರಾಸಾ.1 ರವರನ್ನು ಸಹಾಯಕ ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಿ ಪಾಟೀ ಸವಾಲಿಗೆ ಒಳಪಡಿಸಿದ್ದು, ಸದರಿ

ಪಾಟೀ ಸವಾಲಿನಲ್ಲಿ, ಸದರಿಯವರು ಅಭಿಯೋಜನೆ ಪ್ರಕರಣಕ್ಕೆ ಪೂರಕವಾಗುವತಂಹ ಸಾಕ್ಷ್ಯವನ್ನು ಪಡೆಯುವಲ್ಲಿ ವಿಫಲವಾಗಿರುವುದು ಕಂಡುಬರುತ್ತದೆ.

**12.** ಹೀಗೆ ಈ ಪ್ರಕರಣದ ಮಹತ್ವದ ಸಾಕ್ಷಿದಾರರಾದ ಪಿರ್ಯಾದುದಾರ/ ನೊಂದ ಸಾಕ್ಷಿದಾರರಾದ ಫ್ರಾಸಾ-1 ರವರು ಆರೋಪಿತರು ಆಪಾದಿಸಿರುವ ಕೃತ್ಯವನ್ನು ಎಸಗಿರುವುದಿಲ್ಲ ಎನ್ನುವುದಾಗಿ ನ್ಯಾಯಾಲಯದ ಮುಂದೆ ಸ್ಪಷ್ಟವಾಗಿ ಸಾಕ್ಷ್ಯ ನುಡಿದಿರುವುದರಿಂದ, ಉಳಿದ ಯಾವುದೇ ಅಭಿಯೋಜನಾ ಸಾಕ್ಷಿದಾರರು ಅಭಿಯೋಜನೆಗೆ ಪೂರಕವಾಗಿ ಸಾಕ್ಷ್ಯ ನುಡಿದರೂ ಕೂಡಾ ಆರೋಪಿತರ ವಿರುದ್ಧ ಆರೋಪವನ್ನು ರುಜುವಾತು ಪಡಿಸಲು ಸಾಧ್ಯವಿಲ್ಲ ಎನ್ನುವ ನೆಲೆಯಲ್ಲಿ ಅಭಿಯೋಜನೆಯ ಕೋರಿಕೆಯನ್ನು ತಿರಸ್ಕರಿಸಿ, ಉಳಿದ ಸಾಕ್ಷಿದಾರರ ವಿಚಾರಣೆಗೆ ಅನುಮತಿಸಿರುವುದಿಲ್ಲ.

**13.** ಅಭಿಯೋಜನೆ ಪಕ್ಷದವರು ಆರೋಪಿತರ ಮೇಲಿನ ದೋಷಾರೋಪಣೆಯನ್ನು ಸಂಶಯಾತೀತವಾಗಿ ರುಜುವಾತುಪಡಿಸುವಲ್ಲಿ ಪ್ರಯತ್ನ ಪಟ್ಟರೂ ಫ್ರಾಸಾ.1 ರವರ ಪ್ರತಿಕೂಲ ಸಾಕ್ಷ್ಯವು ಅಭಿಯೋಜನೆಯ ಪ್ರಕರಣದ ಬುನಾದಿಯನ್ನು ನಾಶಗೊಳಿಸುತ್ತದೆ ಎಂದು ಕಂಡು ಬರುತ್ತದೆ. ಹೀಗಾಗಿ, ಸದರಿ ಪ್ರಕರಣದಲ್ಲಿ ಆರೋಪಿತರ ವಿರುದ್ಧ ಅಭಿಯೋಜನೆ ಪಕ್ಷದವರು ಮಾಡಲಾದ ಯಾವುದೇ ದೋಷಾರೋಪಣೆಯನ್ನು ಸಮರ್ಪಕವಾಗಿ ಹಾಗೂ ಸಂಶಯಾತೀತವಾಗಿ ಸಾಬೀತುಪಡಿಸುವಲ್ಲಿ ಸಂಪೂರ್ಣವಾಗಿ ವಿಫಲರಾಗಿರುವುದರಿಂದ ಆರೋಪಿತರ ಮೇಲೆ ಮಾಡಿದ ಆರೋಪಣೆಗಳಿಂದ ಮುಕ್ತಿಗೊಳಿಸಿ, ಬಿಡುಗಡೆಗೊಳಿಸಬೇಕಾಗುತ್ತೆಂದು ಅಭಿಪ್ರಾಯಪಟ್ಟು, ನ್ಯಾಯಾಲಯವು ಈ ಮೇಲಿನ **1** ರಿಂದ **4** ಅಂಶಗಳನ್ನು ನಕಾರಾತ್ಮಕವಾಗಿ ಉತ್ತರಿಸಿರುತ್ತದೆ.

**14**. <u>ಅಂಶ-**5:**</u> ಈ ಮೇಲ್ಕಂಡ ಕಾರಣಗಳಿಗಾಗಿ, ನ್ಯಾಯಾಲಯವು ಈ ಅಂಶವನ್ನು ಕೆಳಕಂಡಂತೆ ಆದೇಶ ಮಾಡಿರುತ್ತದೆ.

<u>ಆದೇಶ</u>

ಭಾರತೀಯ ನಾಗರೀಕ ಸುರಕ್ಷಾ ಸಂಹಿತೆಯ ಕಲಂ.271(1) ರಡಿಯಲ್ಲಿ ದತ್ತಕವಾದ ಅಧಿಕಾರವನ್ನು ಚಲಾಯಿಸಿ 1 ಮತ್ತು 2 ನೇ ಆರೋಪಿತರನ್ನು ಭಾರತೀಯ ನ್ಯಾಯ ಸಂಹಿತೆ 115(2), 118(1), 352,

351(2), ಸಹಕಲಂ 3(5) ರಡಿಯಲ್ಲಿನ ಆರೋಪಗಳಿಂದ ಖುಲಾಸೆ ಗೊಳಿಸಿರುತ್ತದೆ.

ಆರೋಪಿತರ ಮತ್ತು ಅವರ ಜಾಮೀನುದಾರನ ಜಾಮೀನು ಮುಚ್ಚಳಿಕೆಯನ್ನು ಮೇಲ್ಮನವಿ ಅವಧಿ ಮುಗಿದ ನಂತರ ರದ್ದುಗೊಳ್ಳಲು ಆದೇಶಿಸಲಾಗಿದೆ.

ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಂಡಿರುವ ಮಾಲುಪಟ್ಟಿ ಸಂಖ್ಯೆ 121/2025 ರಲ್ಲಿನ ಕ್ರ.ಸಂ.1 ರಲ್ಲಿರುವ ಒಂದು ಸ್ಟೀಲ್ ಬೇಡ್, ಕ್ರ.ಸಂ.2 ರಲ್ಲಿರುವ ಒಂದು ಕೆಂಪು ಬಣ್ಣದ ತುಂಬು ತೋಳಿನ ಶರ್ಟ್ ಮತ್ತು 3 ರಲ್ಲಿರುವ ಬಿಳಿ ಬಣ್ಣ ದ ಬನಿಯನ್ ವಸ್ತುಗಳು ಮೌಲ್ಯ ರಹಿತ ವಸ್ತುವಾಗಿದ್ದು, ಸದರಿ ಸ್ವತ್ತುಗಳನ್ನು ಮೇಲ್ಮನವಿ ಅವಧಿ ಮುಕ್ತಾಯವಾದ ನಂತರ ನಾಶಪಡಿಸಲು ಆದೇಶಿಸಲಾಗಿದೆ.

(ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕ ಯಂತ್ರಕ್ಕೆ ಉಕ್ತಲೇಖನ ನೀಡಿ, ಬೆರಳಚ್ಚು ಮಾಡಿಸಿ, ನಾನು ಪರಿಶೀಲಿಸಿದ ನಂತರ ಅಚ್ಚು ತೆಗೆದು, ನನ್ನ ಸಹಿಯೊಂದಿಗೆ ದಿನಾಂಕಃ 01 ನೇ ಜುಲೈ 2026 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.)

(ಶ್ರೀ ಪ್ರಹಾನ್ ಸಿಂಗ್ ಹೆಚ್.ಪಿ.)
5 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ.ಗಳು, ಶಿವಮೊಗ್ಗ.

## ಅನುಬಂಧ

**ಅಭಿಯೋಜನೆಯ ಪರ ವಿಚಾರಣೆ ಮಾಡಿದ ಸಾಕ್ಷಿಗಳು :-**

ಫ್ರಾ.ಸಾ-1 : ಗಣೇಶ್

**ಅಭಿಯೋಜನೆಯ ಪರ ಗುರುತು ಮಾಡಿದ ದಾಖಲೆಗಳು :-**

| | | |
|---|---|---|
| ನಿ.ಪಿ.1 | : | ಪ್ರಥಮ ವರ್ತಮಾನ ವರದಿ |
| ನಿ.ಪಿ.1(ಎ) | : | ಸಹಿ |
| ನಿ.ಪಿ.2 ಮತ್ತು 7 | : | ಸ್ಥಳ ಪಂಚನಾಮೆಗಳು |
| ನಿ.ಪಿ.2(ಎ) ಮತ್ತು 7(ಎ) | : | ಸಹಿಗಳು |
| ನಿ.ಪಿ.3 ಮತ್ತು 8 | : | ಕಚ್ಚಾ ನಕಾಶೆಗಳು |
| ನಿ.ಪಿ.3(ಎ) ಮತ್ತು 8(ಎ) | : | ಸಹಿಗಳು |

| | | |
|---|---|---|
| ನಿ.ಪಿ.4 ರಿಂದ 6 | : | 3 ಭಾವಚಿತ್ರಗಳು |
| ನಿ.ಪಿ.9 | : | 1 ಭಾವಚಿತ್ರ |

ಅಭಿಯೋಜನೆಯ ಪರ  ಹಾಜರು ಪಡಿಸಿದ ಮುದ್ದೆ ಮಾಲುಗಳು :-

- ಇಲ್ಲ –

ಆರೋಪಿತನ ಪರ ವಿಚಾರಣೆ ಮಾಡಿದ ಸಾಕ್ಷಿಗಳ ಪಟ್ಟಿ:-

-ಇಲ್ಲ –

ಆರೋಪಿತನ   ಪರ ಗುರುತು ಮಾಡಿದ ದಾಖಲೆಗಳ  ಪಟ್ಟಿ:-

-ಇಲ್ಲ –

ಆರೋಪಿತನ   ಪರ ಗುರುತು ಮಾಡಿದ  ಮುದ್ದೆಮಾಲು:-

- ಇಲ್ಲ –

PRAHANSINGH H P

Digitally signed by PRAHANSINGH H P
Date: 2026.07.01 17:58:41 +0530

(ಶ್ರೀ ಪ್ರಹಾನ್ ಸಿಂಗ್ ಹೆಚ್.ಪಿ.)
5 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ.ಗಳು, ಶಿವಮೊಗ್ಗ.

**(ತೆರೆದ ನ್ಯಾಯಾಲಯದಲ್ಲಿ ತೀರ್ಪನ್ನು ಪ್ರತ್ಯೇಕವಾಗಿ ಉಚ್ಚರಿಸಲಾಗಿದೆ)**

ಆದೇಶ

ಭಾರತೀಯ ನಾಗರೀಕ ಸುರಕ್ಷಾ ಸಂಹಿತೆಯ ಕಲಂ.271(1) ರಡಿಯಲ್ಲಿ ದತ್ತಕವಾದ ಅಧಿಕಾರವನ್ನು ಚಲಾಯಿಸಿ 1 ಮತ್ತು 2 ನೇ ಆರೋಪಿತರನ್ನು ಭಾರತೀಯ ನ್ಯಾಯ ಸಂಹಿತೆ 115(2), 118(1), 352, 351(2), ಸಹಕಲಂ 3(5) ರಡಿಯಲ್ಲಿನ ಆರೋಪಗಳಿಂದ ಖುಲಾಸೆ ಗೊಳಿಸಿರುತ್ತದೆ.

ಆರೋಪಿತರ ಮತ್ತು ಅವರ ಜಾಮೀನುದಾರನ ಜಾಮೀನು ಮುಚ್ಚಳಿಕೆಯನ್ನು ಮೇಲ್ಮನವಿ ಅವಧಿ ಮುಗಿದ ನಂತರ ರದ್ದುಗೊಳ್ಳಲು ಆದೇಶಿಸಲಾಗಿದೆ.

ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಂಡಿರುವ ಮಾಲುಪಟ್ಟಿ ಸಂಖ್ಯೆ.121/2025 ರಲ್ಲಿನ ಕ್ರ.ಸಂ.1 ರಲ್ಲಿರುವ ಒಂದು ಸ್ಟೀಲ್ ಬೇಡ್, ಕ್ರ.ಸಂ.2 ರಲ್ಲಿರುವ ಒಂದು ಕೆಂಪು ಬಣ್ಣದ ತುಂಬು ತೋಳಿನ ಶರ್ಟ್ ಮತ್ತು 3 ರಲ್ಲಿರುವ ಬಿಳಿ ಬಣ್ಣ ದ ಬನಿಯನ್ ವಸ್ತುಗಳು ಮೌಲ್ಯ ರಹಿತ ವಸ್ತುವಾಗಿದ್ದು, ಸದರಿ ಸ್ವತ್ತುಗಳನ್ನು ಮೇಲ್ಮನವಿ ಅವಧಿ ಮುಕ್ತಾಯವಾದ ನಂತರ ನಾಶಪಡಿಸಲು ಆದೇಶಿಸಲಾಗಿದೆ.

5 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ.ಗಳು, ಶಿವಮೊಗ್ಗ.